**ದಿನಾಂಕ 03.11.2010ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 5ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ಐ. ಎಂ. ವಿಠ್ಠಲ ಮೂರ್ತಿ, ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಅಧ್ಯಕ್ಷರು |
| 2. ಶ್ರೀ ಗಣೇಶ್ ಮೂರ್ತಿ,<br>ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು | : | ಸದಸ್ಯರು |
| 3. ಶ್ರೀ ಭೀಮಪ್ಪ, ಕೆ.ಎ.ಎಸ್<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಸದಸ್ಯರು |
| 4. ಡಾ. ಅರುಣಾ<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ,<br>ಆನಂದರಾವ್ ವೃತ್ತ, ಬೆಂಗಳೂರು | : | ಸದಸ್ಯರು |
| 5. ಡಾ. ರಾಮಯ್ಯ<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | : | ಸದಸ್ಯರು |
| 6. ಶ್ರೀ ಶಂಕರಪ್ಪ ,<br>ಕಾರ್ಯನಿರ್ವಾಹಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ರಾಯಚೂರು | | ವಿಶೇಷ ಅಹ್ವಾನಿತರು |
| 7. ಶ್ರೀ ಮಲ್ಲಿಕಾರ್ಜುನ ಮೇಟಿ<br>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ವಿಶೇಷ ಉಪ ವಿಭಾಗ,<br>ರಿಮ್ಸ್ ರಾಯಚೂರು | : | ವಿಶೇಷ ಅಹ್ವಾನಿತರು |
| 8. ಶ್ರೀ ಸತೀಶ್, ವಕೀಲರು ಹಾಗು ಕಾನೂನು ಸಲಹೆಗಾರರು,<br>ರಿಮ್ಸ್, ರಾಯಚೂರು | : | ವಿಶೇಷ ಆಹ್ವಾನಿತರು |

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು. ಅಜೆಂಡವಾರು ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 1 : ದಿನಾಂಕ 28.07.2010ರಂದು ಜರುಗಿದ ರಿಮ್ಸ್ ಸಂಸ್ಥೆಯ 4ನೇ ಹಣಕಾಸು ಸಭೆ ನಡುವಳಿಗೆ ಅನುಪಾಲನ ವರದಿಯನ್ನು ಓದಿ ದಾಖಲಿಸುವುದು.**

ದಿನಾಂಕ 28.07.2010ರಂದು ಜರುಗಿದ ನಾಲ್ಕನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಈ ಕೆಳಕಂಡ ಅಂಶಗಳೊಂದಿಗೆ ಓದಿ ದಾಖಲಿಸಿ ಅನುಮೋದಿಸಲಾಯಿತು.

1) ಅನುಪಾಲನಾ ವರದಿಯ ವಿಷಯ ಸೂಚಿ ಸಂಖ್ಯೆ. 5ರಲ್ಲಿ ದಿನಾಂಕ 04.02.201ರಂದು ಜರುಗಿದ ಖರೀದಿ ಸಮಿತಿಯ ಸಭಾ ನಡುವಳಿಗಳನ್ನು ಪರಿಶೀಲಿಸಿ ಒಟ್ಟು ಸುಮಾರು 3.00 ಕೋಟಿ ಮೊತ್ತದ ಉಪಕರಣಗಳು ಖರೀದಿ ಕಡತ ಹಾಗು ಖರೀದಿಗೆ ಸಂಬಂಧ ಪಟ್ಟ ಮತ್ತು ಟೆಂಡರ್‌ನಲ್ಲಿ Prequalify ಟೆಂಡರ್‌ದಾರರನ್ನು ಪಟ್ಟಿ ಮಾಡಲು ಅನುಸರಿಸಿದ ಮತ್ತು ಮೆ॥ ಡಿ.ಎಸ್.ಎಂ.ಸಿ.ಎಸ್, ಬೆಂಗಳೂರು ಇವರಿಂದ ಒಟ್ಟು ರೂ. 23,19,200/- ಮೊತ್ತದಲ್ಲಿ ಓಟಿ ಸೀಲಿಂಗ್ ಲೈಟ್ ಮತ್ತು ಜಿಮ್ನ್ಯಾಸೀಯಮ್ ಉಪಕರಣಗಳನ್ನು ಖರೀದಿಸಿದ ಕುರಿತು ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ವರದಿಯಲ್ಲಿ ಅಪೂರ್ಣ ಮಾಹಿತಿ ಇದ್ದು, ಈ ಕೂಡಲೇ ಸರ್ಕಾರಕ್ಕೆ ಪೂರ್ಣ ಮಾಹಿತಿಯೊಂದಿಗೆ ವರದಿಯನ್ನು ಮರು ಸಲ್ಲಿಸಲು ಸೂಚಿಸಲಾಯಿತು.

2) ಅನುಪಾಲನಾ ವರದಿಯ ವಿಷಯಸೂಚಿ ಸಂಖ್ಯೆ. 19ರಲ್ಲಿ ಬೋಧಕ ಆಸ್ಪತ್ರೆಯ ಗೋಡೆ ಕುಸಿದು ಬಿದ್ದಿದ್ದು ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಪರಿಶೀಲಿಸಿ ಬೋಧಕ ಆಸ್ಪತ್ರೆಯ ಮೇಲ್ಛಾವಣಿ ಈಗಾಗಲೇ ಕುಸಿದು ಬಿದ್ದ ಕಾರಣ ಹೊಸದಾಗಿ ನಿರ್ಮಿಸುತ್ತಿರುವ ನೂತನ ಆಸ್ಪತ್ರೆಗೆ ಡಿಸೆಂಬರ್ ಅಂತ್ಯದ ವೇಳೆಗೆ ತಪ್ಪದೇ ರೋಗಿಗಳನ್ನು ವರ್ಗಾಹಿಸಲು ಕ್ರಮ ಜರುಗಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. ಮತ್ತು ಹಾಜರಿದ್ದ ಕಾರ್ಯನಿರ್ವಾಹಕ ಅಭಿಯಂತರರು ಹಾಗು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ನೂತನ ಕಟ್ಟಡದಲ್ಲಿ ಈಗಾಗಲೇ ಪೂರ್ಣಗೊಂಡಿರುವ ಮಹಡಿಗಳನ್ನು ಸಂಸ್ಥೆಗೆ ಹಸ್ತಾಂತರಿಸಲು ಸೂಚಿಸಿಲಾಯಿತು.

   ಅದೇ ರೀತಿ ನೂತನ ಆಸ್ಪತ್ರೆಗೆ ಒಟ್ಟು 47 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ನಾಲ್ಕನೇ ಮಹಡಿಯವರೆಗೆ ಕಟ್ಟಡ ಕಾಮಗಾರಿ ಸಂಪೂರ್ಣಗೊಂಡಿರುವ ಕುರಿತು ಮಾಹಿತಿ ಪಡೆದು 5 ಮತ್ತು 6ನೇ ಅಂತಸ್ಥಿನ ಕಟ್ಟಡವನ್ನು ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ಪಡೆಯದಿದ್ದುದನ್ನು ಗಮನಿಸಿ ಈಗಾಗಲೇ ಟೆಂಡರ್‌ನಲ್ಲಿ ಅನುಮೋದನೆಗೊಂಡಿರುವ ದರಗಳ ಪ್ರಕಾರ ಸದ್ಯ ಕಾರ್ಯನಿರ್ವಹಿಸುತ್ತಿರುವ ಟೆಂಡರ್‌ದಾರರಿಂದ 5 ಮತ್ತು 6ನೇ ಅಂತಸ್ಥಿನ ಕಾಮಗಾರಿಯನ್ನು ನಿರ್ಮಾಣ ಮಾಡಿಸಿದಲ್ಲಿ ಈಗಿನ ದರಗಳ ಪ್ರಕಾರ ಎಷ್ಟು ಹಣ ಸರ್ಕಾರಕ್ಕೆ ಉಳಿತಾಯವಾಗುವುದೆಂಬುದರ ಪೂರ್ಣ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 2 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆ (ಹಳೆಯ) ಜಿಲ್ಲಾ ಆಸ್ಪತ್ರೆಯ ಮೊದಲನೇ ಅಂತಸ್ಥಿನ ಛಾವಣಿ ಕುಸಿದುಬಿದ್ದಿದ್ದು ಅದನ್ನು ಒಡೆದು ಹಾಕಲು ರೂ. 41.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡುವ ಬಗ್ಗೆ.**

ರಿಮ್ಸ್ ಅವರಣದಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ ನೂತನ ಆಸ್ಪತ್ರೆಗೆ ರೋಗಿಗಳ ಹಿತದೃಷ್ಟಿಯಿಂದ ಡಿಸೆಂಬರ್ ಅಂತ್ಯದ ವೇಳೆಗೆ ಸ್ಥಳಾಂತರಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 3 : ಡಾ. ವಿ.ಬಿ. ಮಾಲ್ವಿ ಪಾಟೀಲ್, ಸಹ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಇವರ ವೇತನ ಪರಿಷ್ಕರಣೆ ಮತ್ತು ವೇತನ ಪಾವತಿ ಬಗ್ಗೆ**

ಸರ್ಕಾರದಿಂದ ಡಾ. ವಿ.ಬಿ. ಮಾಲ್ವಿ ಪಾಟೀಲ್ ಇವರನ್ನು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಿ ಸರ್ಕಾರದಿಂದ ಹೊರಡಿಸಿರುವ ಆದೇಶವನ್ನು ಪುನರ್ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 4 : ಡಾ. ಪುಷ್ಪಾ ಎಸ್. ಡವಳಗಿ, ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಇವರ ವೇತನ ಪರಿಷ್ಕರಣೆ ಮತ್ತು ವೇತನ ಪಾವತಿ ಬಗ್ಗೆ**

ಸರ್ಕಾರದಿಂದ ಡಾ. ಪುಷ್ಪಾ ಎಸ್. ಡವಳಗಿ ಇವರನ್ನು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಿ ಸರ್ಕಾರದಿಂದ ಹೊರಡಿಸಿರುವ ಆದೇಶವನ್ನು ಪುನರ್ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 05 : ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ವಸತಿ ನಿಲಯದ ಪಾಲಕರುಗಳಿಗೆ (ಮುಖ್ಯ ವಾರ್ಡನ್‌ಗೆ ರೂ. 1000/- ಮತ್ತು ಸಹಾಯಕ ವಾರ್ಡನ್‌ಗಳಿಗೆ 750/-) ಪ್ರೋತ್ಸಾಹ ಧನ ನಿಗದಿ ಪಡಿಸುವ ಕುರಿತು.**

ಇನ್ನಿತರ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ವಾರ್ಡನ್ ಮತ್ತು ಸಹಾಯಕ ವಾರ್ಡನ್‌ರಿಗೆ ನೀಡುತ್ತಿರುವ ಪ್ರೋತ್ಸಾಹ ಧನದ ಬಗ್ಗೆ ಪರಿಶೀಲಸಿ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಾರ್ಡನ್‌ರಿಗೆ ಪ್ರತಿ ತಿಂಗಳ ಅವರ ವೇತನದೊಂದಿಗೆ ರೂ. 1000/- ಹಾಗು ಸಹಾಯಕ ವಾರ್ಡನ್‌ರಿಗೆ ರೂ. 750/-ಗಳನ್ನು ಸಂದಾಯ ಮಾಡಲು ಆರ್ಥಿಕ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 6 : ವಿಧಿ ವೈದ್ಯ ಶಾಸ್ತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಗೌರವ ಧನ ನೀಡುವ ಬಗ್ಗೆ.**

ವಿಧಿ ವೈದ್ಯ ಶಾಸ್ತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಈಗಾಗಲೇ ಸರ್ಕಾರದಿಂದ ಹಲವು ರೀತಿಯಲ್ಲಿ ವಿವಿಧ ಭತ್ಯೆಗಳನ್ನು ಸಂದಾಯ ಮಾಡುತ್ತಿದ್ದು, ಕಾರಣ ವಿಧಿವೈದ್ಯ ಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಗೌರವ ಧನ ನೀಡದಿರಲು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 7 : ಭಾರತೀಯ ವೈದ್ಯಕೀಯ ಮಂಡಳಿಯ 4ನೇ ಹಂತದ ನವೀಕರಣಕ್ಕೆ ಅವಶ್ಯವಿರುವ ವಿವಿಧ ಪೀಠೋಪಕರಣಗಳನ್ನು ಖರೀದಿಸಲು ಮತ್ತು ಘನ ದ್ರವ ತ್ಯಾಜ್ಯ ಘಟಕ ಸ್ಥಾಪಿಸುವ ಬಗ್ಗೆ ಜರುಗಿದ ಖರೀದಿ ಸಮಿತಿಯ ನಡುವಳಿಗಳನ್ನು ಅನುಮೋದಿಸುವ ಬಗ್ಗೆ.**

ದಿನಾಂಕ 16.08.2010ರಂದು ನಡೆದ ಖರೀದಿ ಸಮಿತಿ ಸಭೆಯ ನಡುವಳಿಗಳನ್ನು ಪರಿಶೀಲಿಸಿ ಈ ಕೆಳಕಂಡ ಅಂಶಗಳೊಂದಿಗೆ ಅನುಮೋದಿಸಲಾಯಿತು.

600 ಕೆಎಲ್‌ಡಿ ಸಾಮರ್ಥ್ಯದ ಘನ ದ್ರವ್ಯ ತ್ಯಾಜ್ಯ ಘಟಕವನ್ನು ಸ್ಥಾಪಿಸಲು ರೂ. 117.00 ಲಕ್ಷಗಳ ಮೊತ್ತ ಹಾಗು ವಾರಂಟಿ ನಂತರ ಘಟಕದ ನಿರ್ವಹಣೆಗೆ ಪ್ರತಿ ವರ್ಷಕ್ಕೆ ರೂ. 17.00 ಲಕ್ಷಗಳ ಮೊತ್ತಕ್ಕೆ ಮೆ॥ ಲಾರಸ್ ಎನ್‌ವೀರೋ ಪ್ರೈವೇಟ್ ಲಿಮಿಟೆಡ್, ನಾಗಪುರ್ ಇವರು ಟೆಂಡರ್ ದರ ಸೂಚಿಸಿದ್ದು ಈಗಾಗಲೇ ಘನ ದ್ರವ್ಯ ತ್ಯಾಜ್ಯ ಘಟಕವನ್ನು ಸ್ಥಾಪಿಸಲು ರೂ. 117.00 ಲಕ್ಷಗಳ ಮೊತ್ತಕ್ಕೆ ಪೂರೈಕೆ ಆದೇಶ ನೀಡಿದ್ದು, ಆದರೆ ಸರಬರಾಜುದಾರರಾದ ಮೆ॥ ಲಾರಸ್ ಎನ್‌ವೀರೋ ಪ್ರೈವೇಟ್ ಲಿಮಿಟೆಡ್ ಸದರಿ ಘಟಕದ ನಿರ್ವಹಣೆಗೆ ಆದೇಶ ನೀಡದ ಕುರಿತು ಆಕ್ಷೇಪಣೆ ಸಲ್ಲಿಸಿರುವಂತೆ ನಿರ್ದೇಶಕರು ಪ್ರಸ್ತಾಪಿಸಲಾಗಿ ಸರಬರಾಜು ಆದೇಶದ ಪ್ರಕಾರ ಮತ್ತು ಟೆಂಡರ್ ನಿಯಮದ ಪ್ರಕಾರ ಮೆ॥ ಲಾರಸ್ ಎನ್‌ವೀರೋ ಪ್ರೈವೇಟ್ ಲಿಮಿಟೆಡ್, ನಾಗಪುರ್ ಇವರಿಗೆ ಈ ಕೂಡಲೇ ಸದರಿ ಘಟಕವನ್ನು ಸ್ಥಾಪಿಸಲು, ಕಾರ್ಯರಂಭ ಮಾಡಲು ಅಗತ್ಯ ಕ್ರಮ ಕೈಗೊಂಡು ವಾರಂಟಿ ನಂತರ ನಿರ್ವಹಣಾ ವೆಚ್ಚಕ್ಕೆ ಆದೇಶ ನೀಡಲು ಆರ್ಥಿಕ ಸಮಿತಿಯು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 8 : ರಿಮ್ಸ್ ಸಂಸ್ಥೆಯಲ್ಲಿ ಘನ ದ್ರವ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿಗೋಸ್ಕರ ಒಂದು Incinerator ಸ್ಥಾವರ ಸ್ಥಾಪಿಸುವ ಕುರಿತು.**

ರಿಮ್ಸ್ ಸಂಸ್ಥೆಯಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ಘನ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಐ.ಎಂ.ಎ ರಾಯಚೂರು ಇವರಿಗೆ ಇನ್ಸಿನೇಟರ್‌ನ್ನು ಹೊಸದಾಗಿ ಸ್ಥಾಪಿಸಲು ಹಾಗು ಅದರ ಉಪಕರಣಗಳ (Contribution for purchase of equipments) ಖರೀದಿಗಾಗಿ ಪ್ರತಿ ಹಾಸಿಗೆಗೆ ರೂ. 1500/– ರಂತೆ 500 ಹಾಸಿಗೆಗಳಿಗೆ ಒಟ್ಟು ರೂ. 7,50,000/–ಗಳನ್ನು ಪಾವತಿಸಲು ಮತ್ತು ಇನ್ಸಿನೇಟರ್ ನಿರ್ಮಾಣ ಮಾಡಿದ ನಂತರ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಪ್ರತಿ ಹಾಸಿಗೆಗೆ ದಿನಕ್ಕೆ ರೂ. 3/– ರಂತೆ ಮಾಸಿಕ ರೂ. 90 ರಂತೆ (90/- Rupees per Month per Bed) ಹಣವನ್ನು ನಿಗದಿ ಪಡಿಸಿದ್ದು ಒಟ್ಟು 500 ಹಾಸಿಗೆಗೆ ರೂ. 45,000/– ಗಳನ್ನು ಈ ಸಂಸ್ಥೆಗೆ ಬಿಡುಗಡೆಯಾದ ಅನುದಾನ ಲೆಕ್ಕ ಶಿರ್ಷಿಕೆ 2210–05–105–1–40–101 (ಪ್ಲಾನ್)ರ ಅಡಿಯಲ್ಲಿ ಭರಿಸಿ ಪಾವತಿಸಲು ಅನುಮತಿ ನೀಡಿ ಆರ್ಥಿಕ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 09 : ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್ "ಸಿ" ವರ್ಗದ ನೌಕರರಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 100/– ಕಡಿಮೆ ಮಾಡಿ ವೇತನ ಪಾವತಿಸುವ ಕುರಿತು.**

ಸಂಸ್ಥೆಗೆ ಅವಶ್ಯವಿರುವ ಗ್ರೂಪ್ ಸಿ ವರ್ಗದ ನೌಕರರನ್ನು ನಿಯಮಾನುಸಾರ ಟೆಂಡರ್ ಕರೆದು ಹೊರಗುತ್ತಿಗೆಯ ಮೂಲಕ ಅನುಮೋದಿತ ಟೆಂಡರ್ ದರದಲ್ಲಿ ಆರ್ಥಿಕ ಸಮಿತಿಯ ಅನುಮೋದನೆ ಪಡೆದು ಪಾವತಿಸಲು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 10 : ದಿನಾಂಕ 04.08.2010ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರು ಇತ್ತೀಚೆಗೆ ರಿಮ್ಸ್ ಜಿಲ್ಲಾ ಬೋಧಕ ಆಸ್ಪತ್ರೆಗೆ ಭೇಟಿ ನೀಡಿದ ಸಂಧರ್ಭದಲ್ಲಿ ಆಸ್ಪತ್ರೆಯ ಮುಂಭಾಗದ ಅವರಣದಲ್ಲಿ ಉದ್ಯಾನವನವನ್ನು ನಿರ್ಮಾಣ ಮಾಡಲು ಸೂಚಿಸಿರುವ ಬಗ್ಗೆ.**

ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 11 : ರಿಮ್ಸ್ ಸಂಸ್ಥೆಗೆ 52 ಆಸನವುಳ್ಳ ಅಶೋಕ್ ಲೈಲಾಂಡ್ ಹೊಸ ಬಸ್ಸನ್ನು ಖರೀದಿಸುವ ಕುರಿತು.**

ರಿಮ್ಸ್ ಸಂಸ್ಥೆಗೆ ಅವಶ್ಯವಿರುವ 52 ಆಸನವುಳ್ಳ ಅಶೋಕ್ ಲೈಲ್ಯಾಂಡ್ ಹೊಸ ಬಸ್ಸನ್ನು ಖರೀದಿಸಲು ಆರ್ಥಿಕ ಸಮಿತಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 12 : ಸಂಚಿತ ವೇತನದಲ್ಲಿ ಒರ್ವ ದೈಹಿಕ ಶಿಕ್ಷಕರನ್ನು ನೇಮಿಸಿ ಹುದ್ದೆಯ ಮೂಲ ವೇತನಕ್ಕೆ ರೂ. 100/– ಕಡಿಮೆ ಮಾಡಿ ವೇತನ ಪಾವತಿಸಲು ಅನುಮೋದನೆ ನೀಡುವ ಬಗ್ಗೆ.**

ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 13 : ಸರ್ಕಾರವು ದಿನಾಂಕ 01.07.2010ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇ. 46 ರಿಂದ 56.25ಕ್ಕೆ ಹೆಚ್ಚಿಸಿದ್ದು ಅದನ್ನು ರಿಮ್ಸ್ ನೌಕರರಿಗೆ ಪಾವತಿ ಮಾಡುವ ಬಗ್ಗೆ.**

ಸರ್ಕಾರಿ ಆದೇಶದನ್ವಯ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ತುಟ್ಟಿಭತ್ಯೆಯನ್ನು ಶೇ 137 ರಿಂದ 153ಕ್ಕೆ ಹಾಗು ಬೋಧಕೇತರ ಸಿಬ್ಬಂದಿಗಳಿಗೆ ಶೇ 46 ರಿಂದ 56.25ಕ್ಕೆ ಹೆಚ್ಚಿಸಿ ಪಾವತಿಸಲು ಆರ್ಥಿಕ ಸಮಿತಿಯು ಅನುಮೋದನೆ ನೀಡಲಾಯಿತು.

**ವಿಷಯ ಸೂಚಿ ಸಂಖ್ಯೆ 14 : ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ "ಡಿ" ವರ್ಗದ ನೌಕರರಿಗೆ ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸಿದ ಕನಿಷ್ಟ ವೇತನವನ್ನು ಹಾಗು ಫೆಬ್ರವರಿ - 2009ರಿಂದ ಅನ್ವಯ ವಾಗುವಂತೆ ವ್ಯತ್ಯಾಸದ ವೇತನವನ್ನು ಪಾವತಿಸಲು ಅನುಮೋದನೆ ನೀಡುವ ಬಗ್ಗೆ.**

ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ವರ್ಗದ ನೌಕರರಿಗೆ ಕನಿಷ್ಟ ವೇತನ ಪಾವತಿಸುವ ಕುರಿತು ನ್ಯಾಯಲಯದಲ್ಲಿ ದಾವೆ ಹೂಡಿರುವ ಕುರಿತು ನಿರ್ದೇಶಕರು ಆರ್ಥಿಕ ಸಮಿತಿಯ ಗಮನಕ್ಕೆ ತರಲಾಗಿ ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 15 : ಶ್ರೀ ಶೇಖರ್, ಪ್ರಥಮ ದರ್ಜೆ ಸಹಾಯಕರು ಇವರ ನೇಮಕಾತಿಯನ್ನು ಮಹಾಲೇಖಪಾಲರು, ಬೆಂಗಳೂರು ಇವರು ಆಕ್ಷೇಪಣೆ ಸಲ್ಲಿಸಿರುವ ಬಗ್ಗೆ.**

ಶ್ರೀ ಶೇಖರ್, ಪ್ರಥಮ ದರ್ಜೆ ಸಹಾಯಕರು ಇವರ ನೇಮಕಾತಿಯನ್ನು ಮಹಾಲೇಖಪಾಲರು, ಬೆಂಗಳೂರು ಇವರು ಮಾಡಿರುವ ಆಕ್ಷೇಪಣೆಯನ್ನು ಪರಿಶೀಲಿಸಿ ಸದರಿ ಸಿಬ್ಬಂದಿಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನಿಗದಿ ಪಡಿಸಿದ ವಿದ್ಯಾರ್ಹತೆಯನ್ನು ನೇಮಕಾತಿ ಸಮಯದಲ್ಲಿ ಹೊಂದಿರದ ಕುರಿತು ಧೃಡವಾದ ಕಾರಣ ಮತ್ತು ಸದರಿ ಸಿಬ್ಬಂದಿಯ ನೇಮಕಾತಿಯು ನಿಯಮಾನುಸಾರ ಮಾಡದೇ ಇರುವುದರಿಂದ ಸದರಿ ಸಿಬ್ಬಂದಿಯನ್ನು ಸೇವೆಯಿಂದ ಈ ಕೂಡಲೇ ಸೇವೆಯಿಂದ ವಜಾಗೊಳಿಸಲು ಆರ್ಥಿಕ ಸಮಿತಿಯು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 16 : ಹೊರ ಗುತ್ತಿಗೆ ಮೂಲಕ ನೇಮಿಸಿರುವ ಸ್ವಚ್ಛತಾ ಮತ್ತು ಭದ್ರತಾ ಕಾರ್ಯಕರ್ತರಿಗೆ ದಿನಾಂಕ 01.04.2010 ರಿಂದ ಅನ್ವಯವಾಗುವಂತೆ ಸರ್ಕಾರ ಪರಿಷ್ಕೃತ ವಿಡಿಎ ದರ ಹೆಚ್ಚಿಸಿದ್ದು ಅದನ್ನು ಪಾವತಿಸುವ ಕುರಿತು.**

ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 17 : ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಭಾರತೀಯ ವೈದ್ಯಕೀಯ ಮಂಡಳಿಗೆ ರೂ. 22.00 ಲಕ್ಷಗಳನ್ನು ಪಾವತಿಸಿದ್ದು, ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.**

ಸ್ನಾತಕೋತ್ತರ ಕೋರ್ಸುಗಳನ್ನು ರಿಮ್ಸ್ ಸಂಸ್ಥೆಯಲ್ಲಿ ಪ್ರಾರಂಭಿಸಲು ಭಾರತೀಯ ವೈದ್ಯಕೀಯ ಮಂಡಳಿಗೆ ರೂ. 22.00 ಲಕ್ಷಗಳನ್ನು ಪಾವತಿಸಿದ ಕುರಿತು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

**ವಿಷಯ ಸೂಚಿ ಸಂಖ್ಯೆ 18 : ರಿಮ್ಸ್ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಬ್ಲಾಕ್ ಎ ಆಸ್ಪತ್ರೆಗೆ ಭೂಸ್ವಾಧಿನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ ನ್ಯಾಯಲಯದ ಐತೀರ್ಪಿನಂತೆ ಭೂ ಪರಿಹಾರ ಪಾವತಿಸುವ ಕುರಿತು**

ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 19 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು**

ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

(ಐ.ಎಂ. ವಿಠ್ಠಲ ಮೂರ್ತಿ)
ಸರ್ಕಾರದ ಕಾರ್ಯದರ್ಶಿಗಳು,
ಹಾಗೂ ಅಧ್ಯಕ್ಷರು ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ), ಬೆಂಗಳೂರು.

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)